ಆಸ್ಪತ್ರೆಯನ್ನು ಇಲ್ಲಿಗೆ ಸ್ಥಳಾಂತರಿಸಲಾಗಿದೆಯೇ?

ಡಾ।। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಹೌದು

ಆ) ನಲವತ್ತು ರೋಗಿಗಳಿಗೆ ಚಿಕಿತ್ಸೆ ನೀಡಲು ಅವಕಾಶ ಒದಗಿಸಲಾಗಿದೆ.

ಇ) ಇಲ್ಲ.

ಈ) ಸುಮಾರು ಎಪ್ಪತ್ತೈದು ಲಕ್ಷ ರೂ.ಗಳು

ಉ) ಡಿಸೆಂಬರ್ 1996 ರಲ್ಲಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಊ) ಇಲ್ಲ.

ವಿಷಯ:- ಮೈಸೂರಿನ ಮುಕ್ತ ವಿಶ್ವವಿದ್ಯಾಲಯಕ್ಕೆ ಹಣಕಾಸಿನ ನೆರವು.

1333 (1664) **ಶ್ರೀ ರಾಮಲಿಂಗಾರೆಡ್ಡಿ (ಜಯನಗರ):-** ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯನ್ನು ಮುಕ್ತ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗಿನಿಂದ ಈ ಮುಕ್ತ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದೆ?

ಇ) ಈ ವಿಶ್ವವಿದ್ಯಾಲಯಕ್ಕೆ 1996-97ರಲ್ಲಿ ಸರ್ಕಾರದವರು ನೀಡಲಿರುವ ಧನ ಸಹಾಯ-ವೆಷ್ಟು?

ಈ) 1969 ರಿಂದ 1991ರವರೆಗೆ ಅಂಚೆ ತೆರಪಿನ ಸಂಸ್ಥೆಯ ವರಮಾನವನ್ನು ಪ್ರತ್ಯೇಕವಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಡಲಾಗಿದ್ದು ಆ ಹಣವನ್ನು ಈ ಹೊಸ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲಾಗಿದೆ?

ಉ) ಈ ಹೊಸ ವಿಶ್ವವಿದ್ಯಾಲಯಕ್ಕೆ ಧನ ಸಹಾಯ ಆಯೋಗದಿಂದ ಧನ ಸಹಾಯ ಒದಗಿ-ಸಲು ಸರ್ಕಾರದವರು ಕ್ರಮ ಕೈಗೊಳ್ಳುತ್ತಿರುವರೆ?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) ಹೌದು

ಆ) ದಿನಾಂಕ 01-06-1996

ಇ) ಆಯವ್ಯಯದಲ್ಲಿ 10 ಲಕ್ಷ ರೂ.ಗಳನ್ನು ವಿತರಿಸಲಾಗಿದೆ.

ಈ) ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯದ ಅಂಗವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮುಕ್ತ ವಿಶ್ವವಿದ್ಯಾಲಯವೇ ಯು.ಜಿ.ಸಿ.ಯನ್ನು ನೇರವಾಗಿ ಸಂಪರ್ಕಿಸಬೇಕು.